we may be proud; and be it said, as was said on prior occasions in the past that Mysore ranks first and leads all others. That is possible for me if I have got the fullest co-operation of everybody. I will take note of all the suggestions that have been made. I willg keep my health all right and come back enriched. The expression that I know all about the parliamentary procedure is too big a pill for me to swallow. I am absolutely new to this Office and I am trying to study. I have to learn much more. It is not a conference that is held there. It is a Parliamentary Course to which Speakers of all places are invited. You know that law is not stagnant. There are new situations and new solutions found. Coming into personal contact with great men in this particular line, namely, Parliamentary Democracy. will be a source of education for me. I will try to learn as much as I can and return enriched to serve you to the best of my abilities. Thank you.

PAPERS LAID ON THE TABLE

ಶ್ರೀ ಮತಿ ಯಶೋಧರಮ್ಮ ದಾನಪ್ಪ (ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು).—ನಾನು ಬಜೆಟ್ ಚರ್ಚೆಯ ಕಾಲದಲ್ಲಿ ಮಾತನಾಡುವಾಗ Note on the working of the Social Welfare Department during 1962-63 ಸಭೆಯ ಮುಂದೆ ಇಡುತ್ತೇನೆಂದು ಹೇಳಿದ್ದೆ. ಈಗ ಅದನ್ನು ಸಭೆಯ ಗಮನಕ್ಕೆ ತರಬೇಕಾಗಿದೆ ಸಭಾಧ್ಯಕ್ಷರ ಅಪ್ಪಣೆ ಪಡೆದು ಈ ನೋಟನ್ನು ಸಭೆಯ ಮುಂದೆ ಇಡುತ್ತೇನೆ.

MYSORE LAND IMPROVEMENT LOANS BILL, 1963.

Motion to consider

Sri M. V. KRISHNAPPA (Minister for Revenue).—Sir, I beg to move:

"That the Mysore Land Improvement Loans Bill, 1963 as passed by the Legislative Council be taken into consideration,"

Mr. SPEAKER.— Motion moved:

"That the Mysore Land Improvement Loans Bill, 1963 as passed by the Legislative Council be taken into consideration."

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಯಾಮಿ, ತಾವು ಹೇಳಿದ ಹಾಗೆ ನೆನ್ನೆ ದಿವಸ Mysore Agriculturist's Loans Bill ಒಂದು ಪಾಸಾಯಿತು; ಈ ಮಾನ್ಯ ಸಭೆಯಲ್ಲಿ ಅದು ನಿರ್ವಿವಾದವಾಗಿ, ಯುನಾನಿಮಸ್ ಪಾಸ್ ಆಯಿತು. ಆ ಮಸೂದೆಗೂ ಈಗ ತಮ್ಮ ಮುಂದಿರುವ ಮಸೂದೆಗೂ ವ್ಯತ್ಯಾಸವಿಲ್ಲ. ಮಾನ್ಯ ಸದಸ್ಯರು Agriculturist's Loans Bill ಮೇಲೆ ಮಾತನಾಡುವಾಗ Mysore Land Improvement Loans ಬಿಲ್ಲನ್ನೂ ಅದರಲ್ಲಿ ಸೇರಿಸಿ ಒಂದೇ ಮಸೂದೆ ಮಾಡಬಹುದಾಗಿತ್ತು ಎಂದು ಹೇಳಿದರು. ಹಾಗೆ ಮಾಡುವುದಕ್ಕೆ ಆಗಲಿಲ್ಲ. ಹಿಂದೆ 4-5 ಕಾನೂನುಗಳ ಪ್ರಕಾರ ಈ Land Improvement ಲೋನನ್ನು ಕೊಟ್ಟಿದೆ.

ಈ ಕಾನೂನಿನಲ್ಲಿ ಒಂದು ಕ್ಲಾಸ್ ಮಾತ್ರ ಆಡ್ ಮಾಡಿದ್ದೇವೆ. ಅದೇನೆಂದರೆ ಯಾರಾದರೂ ಜಮೀನು ಅಭಿವೃದ್ಧಿಗೆ ಪಡೆದ ಸಾಲವನ್ನು ಅದೇ ಉದ್ದೇಶಕ್ಕೆ ಉಪಯೋಗಿಸದೆ ಬೇರೆ ಬಾಬುಗಳಿಗೆ ವೆಚ್ಚ ಮಾಡಿದರೆ, ಅವರಿಗೆ ಶಿಕ್ಷೆ ನೀಡುವುದು. ಇದೊಂದು ವಿಧಿಯನ್ನು ಮಾತ್ರ ಹೊಸದಾಗಿ ಸೇರಿಸಿದೆ ಅಷ್ಟೆ. ಈ ಮಾನ್ಯ ಸಭೆಯವರು ಈ ಮಸೂದೆಯನ್ನು ಒಪ್ಪಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.